**PW-1:** ಜಿ. ತಿಪ್ಪೇಸ್ವಾಮಿ

ದಿನಾಂಕಃ **19.01.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಪಾಟೀ ಸವಾಲುಃ 2, 4, 6 ಮತ್ತು 7ನೇ ಪ್ರತಿವಾದಿಗಳ ಪರವಾಗಿ ಶ್ರೀ ಡಿ.ಹೆಚ್.ಎಸ್. ವಕೀಲರಿಂದಃ**

1. ನಾನು 10ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಬೋರಪ್ಪ ರವರ ಮಗ ಮಾರಯ್ಯ ಮತ್ತು ಜಾಜೂರಪ್ಪ ರವರ ಮಗ ಮಾರಣ್ಣ ರವರು ಗೊತ್ತು. ಪಹಣಿಯಲ್ಲಿ ನಮ್ಮ ಹೆಸರು ಮತ್ತು ವಿಸ್ತೀರ್ಣ ಬರುತ್ತಿಲ್ಲ ಆ ಕಾರಣ ದಾವೆಯನ್ನು ಸಲ್ಲಿಸಿದ್ದೇನೆ. ಸ.ನಂ. 162 ಹೊಸ ನಂಬರ್ 162/1 ರಿಂದ 162/9 ರವರೆಗಿನ ಸ್ವತ್ತುಗಳಿಗೆ ದಾವೆ ಸಲ್ಲಿಸಿದ್ದೇನೆ. ಸ.ನಂ. 162 ದುರಸ್ಥಿ ಆದ ನಂತರ 9 ಪೋಡುಗಳಾಗಿವೆ ಎಂದರೆ ಸರಿ. ನಾನು ಮತ್ತು ಬೋರಪ್ಪ ರವರ ಮಗ ಮಾರಯ್ಯ ಮತ್ತು ಜಾಜೂರಪ್ಪ ರವರ ಮಗ ಮಾರಣ್ಣ ರವರು ಮೌಖಿಕವಾಗಿ ಸ.ನಂ. 162 ಅನ್ನು ಹಂಚಿಕೆ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಜಾಜೂರಪ್ಪ ರವರ ಮಗ ಮಾರಣ್ಣ ರವರಿಗೆ ಮೌಖಿಕ ವಿಭಾಗದಂತೆ 2 ತಾಕು ಬಂದಿರುತ್ತದೆ ಎಂದರೆ ಸಾಕ್ಷಿಯು ನಾನು 8 ಎಕರೆ ಮಾತ್ರ ಭಾಗ ಮಾಡಿಕೊಂಡಿದ್ದೇವೆ ಎಂದು ಉತ್ತರಿಸುತ್ತಾರೆ.

2. ಜಾಜೂರಪ್ಪ ರವರ ಮಗ ಮಾರಣ್ಣ ರವರಿಗೆ 4 ಎಕರೆ 19 ಗುಂಟೆ ಮೊದಲು ತಾಕು 4 ಎಕರೆ 19 ಗುಂಟೆ 2ನೇ ತಾಕು ಬಂದಿರುತ್ತದೆ ಎಂದರೆ ಸಾಕ್ಷಿಯು ನಾವು ಕೇವಲ ವಿಭಾಗ ಮಾಡಿಕೊಂಡಿದ್ದೇವೆ ಎಂದು ಉತ್ತರಿಸುತ್ತಾರೆ. ಸಾಕ್ಷಿಯು ಮುಂದುವರೆದು ವಿಭಾಗ ಮಾಡಿಕೊಂಡಿಲ್ಲ ನಾವು ಮಾಡಿಕೊಂಡು ತಿನ್ನಲು ಮಾತ್ರ ಮಾಡಿದ್ದೇವೆ ಎಂದು ಉತ್ತರಿಸುತ್ತಾರೆ. 4 ಎಕರೆ 19 ಗುಂಟೆ ವಿಭಾಗ ಮಾಡಿಕೊಂಡಿದ್ದರೂ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಹೆಚ್.ವಿ. ಮಾರಯ್ಯ ರವರಿಗೆ 9 ಎಕರೆ ಮೌಖಿಕ ವಿಭಾಗದಂತೆ ಬಂದಿರುತ್ತದೆ ಎಂದರೆ

ಸರಿಯಲ್ಲ. ದಿನಾಂಕಃ 21.02.1980 ರಲ್ಲಿ ರಾಮಪ್ಪ ರವರ ಹೆಂಡತಿ ರಾಮಕ್ಕ ರವರಿಗೆ 1 ನೇ ತಾಕು 4 ಎಕರೆ 20 ಗುಂಟೆ ಮತ್ತು 2 ನೇ ತಾಕು 4 ಎಕರೆ 20 ಗುಂಟೆ ಬೋರಪ್ಪ ರವರ ಮಗ ಮಾರಯ್ಯ ರವರು ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಅವರಿಗೆ ಮಾರಾಟ ಮಾಡಲು ಬರುವುದಿಲ್ಲ ಎಂದು ಉತ್ತರಿಸುತ್ತಾರೆ. ಮಾರಾಟ ಮಾಡಿದ ಬಗ್ಗೆ ನಾನು ದಾಖಲೆ ಪಡೆದಾಗ ತಿಳಿದಿರುತ್ತದೆ. ಯಾವ ದಿನಾಂಕದಂದು ದಾಖಲೆ ಪಡೆದಿದ್ದೇನೆ ಎಂದರೆ ಗೊತ್ತಿಲ್ಲ. ದಿನಾಂಕಃ 19.03.1979 ರಂದು ಮಾರಣ್ಣ ಬಿನ್ ಜಾಜೂರಪ್ಪ ರವರು ಲಿಂಗಪ್ಪ ಬಿನ್ ಮಾಡಿವಾಳರ ಮೈಲಾರಪ್ಪ ರವರಿಗೆ ಸ್ವತ್ತನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿ.

3. ಪ್ರತಿವಾದಿ 4 ರವರು ಸದರಿ ಲಿಂಗಪ್ಪ ರವರ ಪತ್ನಿ. ಪ್ರತಿವಾದಿ 2, 6 ಮತ್ತು 7 ರವರು ಲಿಂಗಪ್ಪ ರವರ ಮಕ್ಕಳು ಎಂದರೆ ಸರಿ. ಮಾರಾಟದ ವಿಚಾರ ನನ್ನ ಗಮನಕ್ಕೆ ಬಂದಿರುವುದಿಲ್ಲ. ಕ್ರಯಪತ್ರದಂತೆ ಲಿಂಗಪ್ಪ ರವರ ಹೆಸರಿಗೆ ಖಾತೆಯಾಗಿದೆ ಎಂದರೆ ಸಾಕ್ಷಿಯು ಅವರು ಮಾರಾಟ ಮಾಡಿದಾಗ ತನಗೆ ಬೇಕಾದಂತೆ ಮಾಡಿಕೊಂಡಿದ್ದಾರೆ ಎಂದು ಉತ್ತರಿಸುತ್ತಾರೆ. ಜಾಜೂರಪ್ಪ ರವರ ಮಗ ಮಾರಣ್ಣ ಮತ್ತು ಬೋರಪ್ಪ ರವರ ಮಗ ಮಾರಯ್ಯ ರವರ ವಿರುದ್ಧ ಅವರ ಜೀವಿತ ಕಾಲದಲ್ಲಿ ನಾನು ಯಾವುದೇ ದಾವೆ ಸಲ್ಲಿಸಿಲ್ಲ ಎಂದರೆ ಸರಿ. ಮಾರಾಟ ಮಾಡಿರುವ ವಿಚಾರ ಮತ್ತು ಹಂಚಿಕೆಯ ವಿಚಾರ ನನಗೆ ಗೊತ್ತಿದ್ದರೂ ನಾನು ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಮಾರಪ್ಪ ರವರು ಲಿಂಗಪ್ಪ ಮರಣದ ನಂತರ ಪ್ರತಿವಾದಿ 2, 4, 6 ಮತ್ತು 7 ರವರು ಸ್ವತ್ತನ್ನು ಹಂಚಿಕೆ ಮಾಡಿಕೊಂಡಿದ್ದಾರೆ ಎಂದರೆ ಸಾಕ್ಷಿಯು ಅವರ ಆಸ್ತಿ ಏನು ಹಂಚಿಕೊಂಡಿದ್ದಾರೆ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಅವರ ಹಂಚಿಕೆ ಮಾಡಿಕೊಂಡಿರುವ ವಿಚಾರ ದಾಖಲಾತಿಗಳನ್ನು ಪಡೆದಾಗ ತಿಳಿದಿರುತ್ತದೆ. ಯಾವ ದಿನಾಂಕ ದಾಖಲೆಗಳನ್ನು ಪಡೆದಿದ್ದೇನೆ ನನಗೆ ಗೊತ್ತಿಲ್ಲ.

4. ಪ್ರತಿವಾದಿ 2 ರವರಿಗೆ ಹಂಚಿಕೆಯುಟುಂತೆ 2 ಎಕರೆ 5 ಗುಂಟೆ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿ 4 ಮುತ್ಯಾಲಮ್ಮ ರವರಿಗೆ 4 ಎಕರೆ 39 ಗುಂಟೆ

ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ಅದೇ ರೀತಿ 6 ನೇ ಪ್ರತಿವಾದಿಗೆ 1 ಎಕರೆ 36 ಗುಂಟೆ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿ 7 ರವರಿಗೆ 2 ಎಕರೆ 13 ಗುಂಟೆ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ಮೈಲಾರಪ್ಪ ರವರಿಗೆ ಹಂಚಿಕೆಯಂತೆ ಬಂದ 2 ಎಕರೆ 5 ಗುಂಟೆ ಸ್ವತ್ತು ಈಗ ಸ.ನಂ. 162/2 ಎಂದು ಪೋಡಾಗಿದೆ ಎಂದರೆ ಗೊತ್ತಿಲ್ಲ. ಅದೇ ರೀತಿ ಪ್ರತಿವಾದಿ 4 ಮುತ್ಯಾಲಮ್ಮ ರವರಿಗೆ ಬಂದ 4 ಎಕರೆ 39 ಗುಂಟೆ ಸ.ನಂ. 162/5 ಎಂದು ಪೋಡಾಗಿದೆ ಎಂದರೆ ಗೊತ್ತಿಲ್ಲ. ಅದೇ ರೀತಿ ಪ್ರತಿವಾದಿ 6 ನಾರಾಯಣಪ್ಪ ರವರಿಗೆ ಬಂದ 1 ಎಕರೆ 36 ಗುಂಟೆ ಸ.ನಂ. 162/8 ಎಂದು ಪೋಡಾಗಿದೆ ಎಂದರೆ ಗೊತ್ತಿಲ್ಲ. ಅದೇ ರೀತಿ ಪ್ರತಿವಾದಿ 7 ಸುಧಾಕರ್ ರವರಿಗೆ ಬಂದ 2 ಎಕರೆ 13 ಗುಂಟೆ ಸ.ನಂ. 162/9 ಎಂದು ಪೋಡಾಗಿದೆ ಎಂದರೆ ಗೊತ್ತಿಲ್ಲ.

5. ಸ.ನಂ. 162/2, 162/5, 162/8 ಮತ್ತು 162/9 ರ ಸ್ವತ್ತುಗಳಲ್ಲಿ ಅವರವರ ಭಾಗದ ಸ್ವತ್ತುಗಳಲ್ಲಿ ಅವರೇ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ನನ್ನ ವಾದಪತ್ರವನ್ನು ನನ್ನ ವಕೀಲರೇ ತಯಾರು ಮಾಡಿರುತ್ತಾರೆ. ನನ್ನ ವಾದಪತ್ರದ ಖಂಡಿಕೆ 7 ರಲ್ಲಿ ಮಾರಣ್ಣ ಮತ್ತು ಹೆಚ್.ವಿ. ಮಾರಯ್ಯ ರವರು ಮಾರಾಟ ಮಾಡಿರುವ ಆಸ್ತಿಗಳಲ್ಲಿ ಪ್ರತಿವಾದಿಗಳೇ ಸ್ವಾಧೀನದಲ್ಲಿ ಇದ್ದಾರೆ ಎಂದು ಬರೆಸಿದ್ದೇನೆ ಎಂದರೆ ಸರಿ. ಸ.ನಂ. 162 ರಲ್ಲಿ ಕೆಲವು ಕಡೆ ಒಳ್ಳೆ ಭೂಮಿ ಇದ್ದು ಕೆಲವು ಕಡೆ ಬರಡು ಭೂಮಿ ಇದ್ದು ಒಳ್ಳೆಯ ಸ್ವತ್ತನ್ನು ನಾನು ಪಡೆದು ಸರಿಯಿಲ್ಲದ ಸ್ವತ್ತನ್ನು ಪ್ರತಿವಾದಿಗಳಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ತಮ್ಮ ಸ್ವತ್ತುಗಳನ್ನು ಸಾಕಷ್ಟು ಹಣ ವ್ಯಯಿಸಿ ಅಭಿವೃದ್ಧಿಪಡಿಸಿದ್ದು ನಾನು ಈಗ ಅವರ ವಿರುದ್ಧ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾವು ಈಗಾಗಲೇ ಬಾಯಿ ಮಾತಿನ ಮುಖಾಂತರ ಹಂಚಿಕೆ ಮೂಲಕ ವಿಭಾಗ ಮಾಡಿಕೊಂಡಿದ್ದು ಮತ್ತೊಂದು ವಿಭಾಗ ಕೇಳಿರುವುದು ಊರ್ಜಿತವಲ್ಲ ಎಂದರೆ ನಾನು ಆ ಬಗ್ಗೆ ಕೇಳಿಲ್ಲ ಎಂದು ಉತ್ತರಿಸುತ್ತಾರೆ. ಪ್ರತಿವಾದಿಗಳಿಗೆ ಸೇರಿದ ಸ್ವತ್ತುಗಳಲ್ಲಿ ನನಗೆ ಯಾವುದೇ ಹಕ್ಕು ಇರುವುದಿಲ್ಲ

ಎಂದರೆ ಸರಿಯಲ್ಲ. ನಮಗೆ ಭಾಗ ಇರುತ್ತದೆ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

**(ನನ್ನ ಉಕ್ತಲೇಖನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸರಿ ಇದೆ.

Sd/-

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.

ಪಾವಗಡ.